**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.54/2020**

ಪ್ರಾ.ಸಾ. 7

ಚಾ.ಸಾ. 9

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 07.08.2025**

| | |
|---|---|
| ಸಾಕ್ಷಿದಾರರ ಹೆಸರು | ಸುನೀಲ್ |
| ತಂದೆಯ ಹೆಸರು | ಶಂಕರಯ್ಯ |
| ವಯಸ್ಸು | 31 ವರ್ಷ |
| ಉದ್ಯೋಗ | ಆಟೋ ಡ್ರೈವರ್ ಕೆಲಸ |
| ವಾಸ | ತಿಪ್ಪೂರು ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ನ್ಯಾಯಾಲಯದ ಮುಂದೆ ಹಾಜರು ಇರುವ 1 ರಿಂದ 6 ನೇ ಆರೋಪಿಗಳ ಪರಿಚಯ ನನಗೆ ಇದೆ. ಮೃತ ರಾಖಿ ಅಲಿಯಾಸ್ ರಾಕೇಶನ ಪರಿಚಯ ಕೂಡ ಇದೆ. ರಾಕೇಶನಿಗೆ ಚಾಸಾ.1 ಅಣ್ಣ. ರಾಕೇಶ 6-7 ವರ್ಷಗಳ ಹಿಂದೆ ಕೊಲೆಯಾಗಿದ್ದಾನೆ. ಆತ ವಡ್ಡರದೊಡ್ಡಿ ಗ್ರಾಮದ ರಸ್ತೆಯ ಬಳಿ ಮನೆಗಳು ಇರುವಲ್ಲಿ ಕೊಲೆಯಾಗಿದ್ದಾನೆ. ಪೊಲೀಸರು ಅವನು ಕೊಲೆಯಾದ ಜಾಗಕ್ಕೆ ಬಂದಾಗ ನಾನು ಅಲ್ಲೇ ಇದ್ದೆ. ಪೊಲೀಸರಿಗೆ ಆ ಜಾಗ ಯಾರು ತೋರಿಸಿದರು ಗೊತ್ತಿಲ್ಲ. ಪೊಲೀಸರು ಬಂದಾಗ ಅಲ್ಲಿ ಶವ ಇತ್ತು. ಹೆಣ ದಕ್ಷಿಣದ ಕಡೆಗೆ ತಲೆ ಇದ್ದು, ಅಂಗಾತವಾಗಿ ಬಿದ್ದಿತ್ತು. ತಲೆ ಚಚ್ಚಿ ಹೋಗಿತ್ತು, ಎದೆಯಲ್ಲಿ ಗಾಯ ಇತ್ತು. ಅಲ್ಲಿ ಕಲ್ಲು ಮತ್ತು ಕುಡ್ಲಿನ ಇಡಿಕೆ ಇತ್ತು. ಅಲ್ಲಿ ಒಂದು ಬೈಕು ನಿಂತಿತ್ತು, ಎರಡು ಚಪ್ಪಲಿ ಬಿದ್ದಿತ್ತು. ಚಪ್ಪಲಿ ಮೃತ ದೇಹಕ್ಕಿಂತ ಸ್ವಲ್ಪ ದೂರದಲ್ಲಿತ್ತು. ಮೃತ ದೇಹದ ಮೇಲೆ ಬಟ್ಟೆ ಇತ್ತು, ಶರ್ಟ್ ಮತ್ತು ಪ್ಯಾಂಟು ಇತ್ತು. ಯಾವ ರೀತಿಯ ಬಟ್ಟೆ ಎಂದು ಈಗ ನನಗೆ ನೆನಪಿಲ್ಲ. ಅಲ್ಲಿ ಪೊಲೀಸರು ಮಹಜರು ಮಾಡಿ ಫೋಟೋ ತೆಗೆದರು. ಅಲ್ಲಿ ಪೊಲೀಸರು ಸಾದಾ ಮಣ್ಣು,

ರಕ್ತಮಿಶ್ರಿತ ಮಣ್ಣು, ಕಲ್ಲುಗಳು, ಕುಡ್ಲುವಿನ ಹಿಡಿ ಮತ್ತು ಚಪ್ಪಲಿ ಮತ್ತು ಬೈಕ್ ಗಳನ್ನು ಸಂಗ್ರಹಿಸಿದರು. ಅಲ್ಲಿ ಬೆಳಗ್ಗೆ 9.00 ರಿಂದ 11.00 ಗಂಟೆವರೆಗೆ ಮಹಜರು ಮಾಡಿದರು. ಆ ಮಹಜರಿಗೆ ನನ್ನ ಸಹಿಯನ್ನು ಅಲ್ಲೇ ತೆಗೆದುಕೊಂಡರು. ಸಾಕ್ಷಿ ನಿಪಿ.2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಬೇರೆ 2-3 ಜನ ಕೂಡ ಇದ್ದರು ಮತ್ತು ಮಹಜರಿಗೆ ಸಹಿ ಮಾಡಿದ್ದಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಆಗ ತೆಗೆದ ಪೊಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.3 ರ 4 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆ ಪೊಟೋದಲ್ಲಿ ನಾನು, ಚಾಸಾ.1 ಮತ್ತು ಪೊಲೀಸರು ಇದ್ದೇವೆ, ಇನ್ನೊಬ್ಬರ ಹೆಸರು ಗೊತ್ತಿಲ್ಲ. ಅಂದು ಪೊಲೀಸರು ಸಂಗ್ರಹಿಸಿದ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮು.ಮಾ.1 ರಿಂದ ಮು.ಮಾ.5 ಗಳನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

*2.* ದಿನಾಂಕ *28.06.2019* ರಂದು ವಡ್ಡರದೊಡ್ಡಿ ಗ್ರಾಮದ ಕೃಷ್ಣರವರ ವಾಸದ ಮನೆಯ ಮುಂದಿನ ಸಾರ್ವಜನಿಕ ರಸ್ತೆಯನ್ನು ಚಾಸಾ. *1* ರವರು ಪೊಲೀಸರಿಗೆ ತೋರಿಸಿದರು ಎಂದರೆ ಸರಿ. ಚಾಸಾ.*1* ರವರು ತೋರಿಸಿದ ಆ ಜಾಗದಲ್ಲಿ ಪೊಲೀಸರು ನನ್ನ ಮತ್ತು ಚಾಸಾ.*5* ಕೃಷ್ಣರವರ ಸಮಕ್ಷಮ ಮಹಜರು ಮಾಡಿದರು ಎಂದರೆ ಸರಿ. ಶವದ ಮೈಮೇಲೆ *19* ಗಾಯಗಳು ಇತ್ತು ಎಂದರೆ ಸರಿ. ಎಡಕಿವಿ ಮೇಲ್ಭಾಗ, ಎಡತಲೆ, ಎಡಮುಂದಲೆ, ಎಡಗಣ್ಣಿನ ಹುಬ್ಬು, ಎಡಗಣ್ಣಿನ ಹುಬ್ಬಿನ ಪಕ್ಕ, ಮೂಗಿನ ಕೆಳಭಾಗ, ತುಟ್ಟಿಯ ಮೇಲ್ಭಾಗ, ಬಲಗೆನ್ನೆಯಿಂದ ಬಲತೋಳಿನವರೆಗೆ, ಕೆಳತುಟ್ಟಿಯ ಮೇಲೆ, ಗದ್ದದ ಮೇಲೆ, ಬಲಕತ್ತಿನಲ್ಲಿ, ಕತ್ತಿನ ಮಧ್ಯದಲ್ಲಿ, ಬಲಗೈ ತೋರುಬೆರಳಿನ ಗಿಣ್ಣೆ ಮೇಲೆ, ಬಲಗೈಯ ಮಧ್ಯಬೆರಳಿನ ಮೇಲೆ ಗಾಯಗಳು ಇತ್ತು ಮತ್ತು ನಾಲಿಗೆ ಕತ್ತರಿಸಿತ್ತು, ಎಡಕಿಬ್ಬರಿಯಲ್ಲಿ, ಎಡಸೊಂಟದ ಬಳಿ, ಕಂಕುಳ ನೇರದಲ್ಲಿ, ಬಲಭುಜದ ಮೇಲೆ ಗಾಯಗಳು ಇತ್ತು ಎಂದರೆ ಸರಿ. ಶವದ ಮೈಮೇಲೆ ತಿಳಿಹಸಿರು ಬಣ್ಣದ ತುಂಬುತೋಳಿನ ಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟು, ಕಪ್ಪು ಬಣ್ಣದ ಸ್ಯಾಂಡೋ ಬನಿಯನ್, ನೀಲಿ ಬಣ್ಣದ ಅಂಡರ್ ವೇರ್, ಬಲಮುಂಗೈಯಲ್ಲಿ ಮಾಸಲು ಬಣ್ಣದ ಒಂದು ದಾರ ಇತ್ತು ಎಂದರೆ ಸರಿ. ಸದರಿ ಬಟ್ಟೆಗಳಲ್ಲಿ ರಕ್ತ

ಅಂಟಿತ್ತು ಎಂದರೆ ಸರಿ. ಪೊಲೀಸರು ನನ್ನ ಮತ್ತು ಚಾಸಾ.*1* ಮತ್ತು ಚಾಸಾ.*5* ರವರ ಸಮಕ್ಷಮ ಮಹಜರು ಮಾಡಿದರು ಎಂದರೆ ಸರಿ. ನಿಪಿ.*3* ಪೊಟೋದಲ್ಲಿರುವ ವ್ಯಕ್ತಿ ಕೃಷ್ಣ ಎಂದರೆ ಅವರ ಹೆಸರು ನನಗೆ ಗೊತ್ತಿಲ್ಲ. ಅವರ ಹೆಸರು ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *1* ರಿಂದ *6* ನೇ ಆರೋಪಿಗಳ ಪರ ಶ್ರೀ ಹೆಚ್ ಬಿ ವಕೀಲರಿಂದಃ**

1. ನಮ್ಮ ಊರಿನಿಂದ ಸದರಿ ಶವ ಇದ್ದ ಜಾಗ 4 ಕಿ.ಮೀ. ದೂರ ಇದೆ. ನಾನು ಆ ಜಾಗಕ್ಕೆ ಹೋದಾಗ ಅಲ್ಲಿ ಸುಮಾರು 10 ಜನ ಇದ್ದರು. ಅವರ ಹೆಸರುಗಳು ಗೊತ್ತಿಲ್ಲ. ಅಲ್ಲಿದ್ದವರ ಊರು ಯಾವುದು ಎಂದು ಗೊತ್ತಿಲ್ಲ. ಅಲ್ಲಿ ಪೊಲೀಸರು ಶವದ ಶರ್ಟ್ ಅನ್ನು ಬಿಚ್ಚಿದರು. ಶರ್ಟ್ ಅನ್ನು ಬಿಚ್ಚುವಾಗ ಪೊಟೋ ತೆಗೆದಿಲ್ಲ. ಬನಿಯನ್, ನಿಕ್ಕರ್ ಮತ್ತು ಪ್ಯಾಂಟನ್ನು ನನ್ನ ಸಮಕ್ಷಮ ತೆಗೆದಿಲ್ಲ. ನಿಪಿ.2 ಮಹಜರು ಮಾಡುವಾಗ ನಾನು ಅಲ್ಲಿ ಇರಲಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಗಾಯದ ಅಳತೆಗಳನ್ನು ಮಾಡಿಲ್ಲ. ನಾನು ಎಷ್ಟು ಗಾಯಗಳು ಆಗಿತ್ತು ಎಂದು ನೋಡಿಲ್ಲ ಎಂದರೆ ಸರಿ.

2. ಶವ ಬಿದ್ದ ಜಾಗದಿಂದ 6–7 ಅಡಿ ದೂರದಲ್ಲಿ ಶವದಿಂದ ಉತ್ತರಕ್ಕೆ ಬೈಕು ಇತ್ತು. ಶವದಿಂದ ಅರ್ಧ ಅಡಿ ದೂರದಲ್ಲಿ ಕಲ್ಲು ಇತ್ತು. ಅಲ್ಲಿ ಮನೆಕಲ್ಲು, ಚಪ್ಪಡಿ ಕಲ್ಲು ಮತ್ತು ಇತರೆ ಕಲ್ಲುಗಳು ಇದ್ದವು. ನಾನು ಹೇಳಿದ ಮನೆಕಲ್ಲು, ಚಪ್ಪಡಿ ಕಲ್ಲು ಮತ್ತು ಇತರೆ ಕಲ್ಲುಗಳ ಮೇಲೆ ರಕ್ತ ಬಿದ್ದಿರಲಿಲ್ಲ.

3. ಈ ಪ್ರಕರಣದಲ್ಲಿ ಪೊಲೀಸರು ನನ್ನ ಹೇಳಿಕೆ ಮಾಡಿಲ್ಲ. ನಾನು ಠಾಣೆಯಲ್ಲಿ ದಾಖಲೆಗೆ ರುಜು ಮಾಡಿದ್ದು ಎಂದರೆ ಸರಿಯಲ್ಲ. ಆರೋಪಿಗಳ ತಂದೆ ಹೆಸರು ಗೊತ್ತಿಲ್ಲ. ಅವರ ಉದ್ಯೋಗದ ಬಗ್ಗೆ ಗೊತ್ತಿಲ್ಲ. ಮೃತನ ಅಣ್ಣನ ಮಾತುಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.